**ಸಾಕ್ಷಿಯನ್ನು ದಿನಾಂಕಃ 25.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎ.ಎಂ.ಎಂ. ವಕೀಲರಿಂದಃ**

ಸಾಕ್ಷಿಗೆ ನಿ.ಪಿ.-1 ಅನ್ನು ತೋರಿಸಲಾಗಿ ಸಾಕ್ಷಿ ಅದು ಪ್ರತಿವಾದಿಗಳು ವಾದಿಗೆ ಬರೆದುಕೊಟ್ಟ ಕ್ರಯ ಒಪ್ಪಂದ ಕರಾರು ಪತ್ರವೆಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿ.ಪಿ.-1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಟಿ.ಆರ್.ಎಂ. ವಕೀಲರಿಂದಃ**

ನಾನು ಆಟೋ ಓಡಿಸಿಕೊಂಡು ಜೀವನ ನಡೆಸುತ್ತೇನೆ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಸಹ ನಡೆಸುತ್ತೇನೆಂದರೆ ಸರಿಯಲ್ಲ. ನಿ.ಪಿ.-1 ಕ್ರಯ ಒಪ್ಪಂದ ಕರಾರು ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಗೊತ್ತಿರುತ್ತದೆ. 1 ನೇ ಪ್ರತಿವಾದಿ ನಮ್ಮ ಊರಿನವರೇ ಎಂದರೆ ಸರಿ. ಈ ಹಿಂದೆ 1 ನೇ ಪ್ರತಿವಾದಿ ವಾದಿಗೆ ಸೇರಿದ 02 ಎಕರೆ ಜಮೀನನ್ನು ಗುತ್ತಿಗೆಗೆ ಪಡೆದು ವ್ಯವಸಾಯ ಮಾಡುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಾರ್ಚಹಳ್ಳಿ ಗ್ರಾಮದ ಸ.ನಂ. 30/1ಎ ನ 35 ಗುಂಟೆ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಅದೇ ಸ.ನಂ. ನ 09 ಗುಂಟೆ ಜಮೀನಿನ ಚೆಕ್ಕುಬಂದಿ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಹಿಂದಿನಿಂದಲೂ ವಾದಿಯ ಜೊತೆ ಸಾಲದ ವ್ಯವಹಾರ ಮಾಡುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಾರ್ಚಹಳ್ಳಿ ಗ್ರಾಮದಲ್ಲಿ 2022 ನೇ ಸಾಲಿನಲ್ಲಿ 01 ಎಕರೆಗೆ ಮಾರುಕಟ್ಟೆ ಮೌಲ್ಯ ರೂ. 60,00,000/- ರಿಂದ ರೂ. 70,00,000/- ಇದ್ದಿರುತ್ತದೆಂದರೆ ಆ ಬಗ್ಗೆ ನನಗೆ

ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ವಾದಿಯಿಂದ 02-03 ಕಂತುಗಳಲ್ಲಿ ಒಟ್ಟು ರೂ. 1,00,000/- ಸಾಲ ಪಡೆದಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಧಾರ ಪತ್ರವನ್ನು ನಾವೇ ಹೇಳಿ ಬರೆಸಿರುತ್ತೇವೆ. ನಿ.ಪಿ.-1 ಅನ್ನು ಬರೆಯುವಾಗ ಆಸ್ತಿಯನ್ನು ಕೊಡುವವರು ಹಾಗು ಪಡೆಯುವವರು ಇಬ್ಬರೂ ಇದ್ದಿದ್ದರು. ಸದರಿ ಪತ್ರವನ್ನು ಬರೆಯುವಾಗ ವಾದಿ ಎಷ್ಟು ಛಾಪಾ ಕಾಗದ ತಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ ಹಾಗು 1 ನೇ ಪ್ರತಿವಾದಿಯ ನಡುವಿನ ಸಾಲದ ವ್ಯವಹಾರದ ಸಮಯದಲ್ಲಿ ನಾನು ಹೋಗಿರವುದಿಲ್ಲ. ಸಾಕ್ಷಿ ಮುಂದುವರೆದು ನಿ.ಪಿ.-1 ಕ್ರಯ ಒಪ್ಪಂದ ಪತ್ರ ಬರೆಸಿಕೊಳ್ಳುವಾಗ ನಾನು ಇದ್ದಿರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿಗಳು ವಾದಿಗೆ ಯಾವುದೇ ಕ್ರಯ ಒಪ್ಪಂದ ಕರಾರು ಪತ್ರ ಬರೆದುಕೊಟ್ಟಿರುವುದಿಲ್ಲ ಬದಲಾಗಿ 1 ನೇ ಪ್ರತಿವಾದಿಯು ವಾದಿಯಿಂದ ಪಡೆದ ಸಾಲಕ್ಕೆ ಭದ್ರತೆಯಾಗಿ ಆಧಾರ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಯ ಮೇಲಿನ ನಂಬಿಕೆಯಿಂದ ಆಧಾರ ಪತ್ರವೆಂದು ಸಹಿ ಮಾಡಿದ್ದು ಆದರೆ ವಾದಿಯು ಅದನ್ನು ದುರುಪಯೋಗ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿ.ಪಿ.-1 ಕ್ಕೆ ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲೆಗೆ ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ಸಹಿ ಮಾಡಿರುವುದಿಲ್ಲ. ನಾನು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದು ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ಇದೇ ರೀತಿ ಸುಳ್ಳು ಪತ್ರಗಳಿಗೆ ಸಹಿ ಮಾಡಿ ನಂತರ ಸುಳ್ಳು ಸಾಕ್ಷ್ಯ ನೀಡುವ ಪ್ರವೃತ್ತಿ ಹೊಂದಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಗೆ ಯಾವುದೇ ಕ್ರಯ ಒಪ್ಪಂದ ಕರಾರುಪ ಪತ್ರ ಮಾಡಿಕೊಟ್ಟಿರುವುದಿಲ್ಲ ಬದಲಾಗಿ ನಾನು ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.-1 ಕ್ರಯದ ಕರಾರು ಒಪ್ಪಂದ ಪತ್ರ ಆಗಿತ್ತು ಎಂದು ಹೇಳಲಾದ ದಿನ ಪ್ರತಿವಾದಿಗಳು ವಾದಿಯಿಂದ ಯಾವುದೇ ಹಣವನ್ನು ಸಹ ಪಡೆದುಕೊಂಡಿರುವುದಿಲ್ಲ ಬದಲಾಗಿ ಈ ಹಿಂದೆ 1 ನೇ ಪ್ರತಿವಾದಿಯು ವಾದಿಯಿಂದ ಪಡೆದುಕೊಂಡು ರೂ. 1,00,000/- ಸಾಲದ ಹಣದ ಭದ್ರತೆಗಾಗಿ ಪ್ರತಿವಾದಿಗಳು ಆಧಾರ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**